9-72 (143)

# ಕರ್ನಾಟಕ ವಿಧಾನ ಪರಿಷತ್ತು

## ಶ್ರೀ ಆರ್.ಧರ್ಮಸೇನ., ಮಾನ್ಯ ವಿಧಾನ ಪರಿಷತ್ ಸದಸ್ಯರು, ಇವರು ನಿಯಮ 72ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.

**ವಿಷಯ:-**

ನ್ಯಾಯಮೂರ್ತಿ ಸದಾಶಿವ ಆಯೋಗದ ವರದಿ ಸಲ್ಲಿಸಿ ಹಲವಾರು ವರ್ಷಗಳಾದರೂ ಅದನ್ನು ಜಾರಿಗೆ ತರುವಲ್ಲಿ ಸರ್ಕಾರಗಳು ವಿಳಂಬ ನೀತಿಯನ್ನು ಅನುಸರಿಸುತ್ತಿರುವುದರಿಂದ ದಲಿತರಿಗೆ ಅದರಲ್ಲೂ ಮುಖ್ಯವಾಗಿ ಎಡಗೈ ಮಾದಿಗ ಸಮುದಾಯದವರಿಗೆ ಅನ್ಯಾಯವಾಗುತ್ತಿದ್ದು, ಸದಾಶಿವ ಆಯೋಗದ ವರದಿಯನ್ನು ಶೀಘ್ರವಾಗಿ ಜಾರಿಗೆ ತರಬೇಕೆಂದು ಒತ್ತಾಯಿಸಿ ಈ ಬಗ್ಗೆ ಮಾನ್ಯ ಸಮಾಜ ಕಲ್ಯಾಣ ಸಚಿವರ ಗಮನ ಸೆಳೆಯ ಬಯಸುತ್ತೇನೆ.

**ಉತ್ತರ:**

(1) ಸಂವಿಧಾನದ 15 ಮತ್ತು 16ನೇ ಅನುಚ್ಛೇಧದ ಅಡಿಯಲ್ಲಿ ಅನುಸೂಚಿತ ಜಾತಿಗಳಿಗೆ ಸರ್ಕಾರವು ವಿಸ್ತರಿಸಿದ ಮೀಸಲಾತಿ ಪ್ರಯೋಜನಗಳನ್ನು ನ್ಯಾಯಸಮ್ಮತ್ತವಾಗಿ ಅನುಸೂಚಿತ ಜಾತಿಗಳ ಎಲ್ಲಾ ಜಾತಿಗಳು, ಜನಾಂಗಗಳು ಮತ್ತು ಬುಡಕಟ್ಟುಗಳು ಅನುಭವಿಸುತ್ತಿವೆಯೇ ಎಂಬುದನ್ನು ಪರಿಶೀಲಿಸಿ ವರದಿ ನೀಡುವುದು.

(2) ಇಲ್ಲದಿದ್ದರೇ, (i) ಅದಕ್ಕೆ ಕಾರಣಗಳು ( ಶೈಕ್ಷಣಿಕ, ಆರ್ಥಿಕ ಅಥವಾ ಇತರೆ); (ii) ಅನುಸೂಚಿತ ಜಾತಿಗಳ ಬೇರೆ ಬೇರೆ ಜಾತಿಗಳು, ಜನಾಂಗಗಳು ಮತ್ತು ಬುಡಕಟ್ಟುಗಳಲ್ಲಿ ಸಮಾನವಾಗಿ ಹಂಚಿಕೆಯಾಗುತ್ತಿವೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ತೆಗೆದುಕೊಳ್ಳಬಹುದಾದ ಕ್ರಮಗಳು; (iv) ಮೇಲೆ ಉಲ್ಲೇಖಿಸಿದ ವಿಷಯಕ್ಕೆ ಸಂಬಂಧಪಟ್ಟ ಅಥವಾ ಅನುಷಂಗಿಕವಾದ ಅಥವಾ ಅದರಿಂದ ಉದ್ಭವಿಸುವ ಇತರ ವಿಷಯಕ್ಕೆ ಸಂಬಂಧಿಸಿದಂತೆ ಪರಿಶೀಲನೆ ಮಾಡಿ ಸಮೀಕ್ಷೆ ಕೈಗೊಳ್ಳಲು Commission of inquiry act 1952, section 3 ರನ್ವಯ ನ್ಯಾಯಮೂರ್ತಿ ಶ್ರೀ ಎ.ಜೆ. ಸದಾಶಿವ ಆಯೋಗವನ್ನು ದಿನಾಂಕ:24.09.2005ರಂದು ರಚಿಸಲಾಗಿತ್ತು. ಸದರಿ ಆಯೋಗವು ದಿನಾಂಕ:14.06.2012ರಲ್ಲಿ ಸರ್ಕಾರಕ್ಕೆ ವರದಿ ನೀಡಿರುತ್ತದೆ.

ದಿನಾಂಕ:15.02.2018 ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಿ ಸದರಿ ವಿಷಯವನ್ನು ಸಮಗ್ರವಾಗಿ ಪರಿಶೀಲಿಸಿ ಸೂಕ್ತ ಶಿಫಾರಸ್ಸುಗಳನ್ನು ಮಾಡಲು ಸಚಿವ ಸಂಪುಟದ ಒಂದು ಉಪ ಸಮಿತಿಯನ್ನು ರಚಿಸಲು ನಿರ್ಣಯ ಕೈಗೊಳ್ಳಲಾಗಿದ್ದು, ಅದರಂತೆ, ಸಚಿವ ಸಂಪುಟ ಉಪ ಸಮಿತಿಯನ್ನು ದಿನಾಂಕ:08.03.2018ರಲ್ಲಿ ರಚಿಸಲಾಗಿತ್ತು. ತದನಂತರ ಸರ್ಕಾರವು ಬದಲಾವಣೆಯಾಗಿ ನೂತ**ನ** ಸರ್ಕಾರವು ಅಸ್ತಿತ್ವಕ್ಕೆ ಬಂದ ಹಿನ್ನೆಲೆಯಲ್ಲಿ ಸಚಿವ ಸಂಪುಟ ಉಪ ಸಮಿತಿಯನ್ನು ಪುನರ್‌ರಚಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

**ಸಕಇ 96 ಎಸ್‌ಎಡಿ 2021**

(ಬಿ. ಶ್ರೀರಾಮುಲು)
ಸಮಾಜ ಕಲ್ಯಾಣ ಇಲಾಖಾ ಸಚಿವರು.